2. : ಬೆಂಗಳೂರು ದಕ್ಷಿಣ ತಾಲ್ಲೂಕಿನ ಚಿಕ್ಕೆಲ್ಲೂರು ಗ್ರಾಮದಲ್ಲಿ ಪೊಲೀಸರಿಂದ ದೌರ್ಜನ್ಯ.

ಡಾ: ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಚಿಕ್ಕೆಲ್ಲೂರು ಗ್ರಾಮದಲ್ಲಿ ಪೊಲೀಸರು ಆಕ್ರಮವಾಗಿ ಎಂಟು ಕುಟುಂಬಗಳನ್ನು ಒಕ್ಕಲೆಬ್ಬಿಸಿ ದೌರ್ಜನ್ಯ ನಡೆಸಿರುತ್ತಿರುವ ಬಗ್ಗೆ ಮಾನ್ಯ ಗೃಹ ಹಾಗೂ ವಕ್ಫ್ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ರೋಷನ್‌ಬೇಗ್ (ಗೃಹ ಹಾಗೂ ವಕ್ಫ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಸರ್ವೆ ನಂ. 72, 73, 74, 75, 82, ಹಾಗೂ 83 ಚಿಕಕ್ಕೆಲ್ಲೂರು ಗ್ರಾಮ, ಬೆಂಗಳೂರು ಉತ್ತರ ತಾಲ್ಲೂಕಿಗೆ ಸಂಬಂಧಿಸಿದ್ದು, ಸದರಿ ಜಮೀನಿನ ಬಗ್ಗೆ ಶ್ರೀ ಟಿ. ಹನುಮಯ್ಯ ಹಾಗೂ ಆತನ ಮಕ್ಕಳಿಗೂ ಮತ್ತು ಶ್ರೀ ಬಸವಯ್ಯ ಹಾಗೂ ಆತನ ಮಕ್ಕಳಿಗೂ ಜಮೀನಿನ ಒಡೆತನದ ಬಗ್ಗೆ ವಿವಾದವು 1965ನೇ ಇಸವಿಯಿಂದ ನಡೆಯುತ್ತಿದ್ದು, ವಿವರಗಳು ಈ ಕೆಳಗಿನಂತಿರುತ್ತವೆ.

ಶ್ರೀ ಟಿ. ಹನುಮಯ್ಯನವರು 1965ನೇ ಸಾಲಿನಲ್ಲಿ ಶ್ರೀ ಬಸವಯ್ಯನವರಿಂದ ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದು, ಶ್ರೀ ಬಸವಯ್ಯನವರು ಜಮೀನು ಕ್ರಯ ಮಾಡಿಕೊಡದೇ ಇದ್ದುದರಿಂದ, ಈ ಬಗ್ಗೆ ನ್ಯಾಯಾಲಯದ ಮೂಲಕ ಶ್ರೀ ಟಿ. ಹನುಮಯ್ಯನವರು ಕ್ರಯ ಪತ್ರ ಮಾಡಿಸಿಕೊಂಡು ಅವರು ಸ್ವಾಧೀನಾನುಭವದಲ್ಲಿ ಜಮೀನನ್ನು ಇಟ್ಟುಕೊಂಡಿರುತ್ತಾರೆ ಹಾಗೂ ಜಮೀನಿಗೆ ಅವರೇ ಮಾಲೀಕರಾಗಿರುತ್ತಾರೆ.

1974 ನೇ ಇಸವಿಯಲ್ಲಿ ಶ್ರೀ ಬಸವಯ್ಯನವರ ಮಕ್ಕಳಾದ ಪರಮಶಿವಯ್ಯ ಮತ್ತು ಇತರರು 1971ರಲ್ಲಿ ನ್ಯಾಯಾಲಯದ ಆದೇಶದ ಮೇಲೆ ಆಗಿದ್ದ ಕ್ರಯ ಪತ್ರವನ್ನು ವಜಾ ಮಾಡಬೇಕೆಂದು ಹಾಕಿಕೊಂಡ ಅಪೀಲನ್ನು ನ್ಯಾಯಾಲಯವು ಒ. ಎಸ್. ಹಂ. 133:74 ರಲ್ಲಿ ವಜಾ ಮಾಡಿರುತ್ತದೆ. ನಂತರ ಮೇಲಿನ ತೀರ್ಪಿನ ಮೇಲೆ ಬೆಂಗಳೂರು ಸಿವಿಲ್ ನ್ಯಾಯಾಲಯಕ್ಕೆ ಅಪೀಲ್ ಹಾಕಿದ್ದರೂ ಸಹ, ಆರ್. ಎ. 8:78 ರಲ್ಲಿ ವಜಾ ಮಾಡಲಾಗಿತ್ತು. ತರುವಾಯ ಮೇಲ್ಕಂಡ ಎಲ್ಲಾ ನ್ಯಾಯಾಲಯದಲ್ಲೂ ಸೋಲನ್ನು ಅನುಭವಿಸಿದ ಮೇಲೆ ಮಾಗಡಿ ಭೂ ನ್ಯಾಯ ಮಂಡಳಿಗೆ ಗೇಣಿದಾರರೆಂದು ತಪ್ಪು ಮಾಹಿತಿ ಸಲ್ಲಿಸಿ, 1979ನೇ ಸಾಲಿನಲ್ಲಿ ಫಾರಂ 7ನ್ನು ಹಾಕಿಕೊಂಡಿದ್ದರು. ಸದರಿ ಭೂ ನ್ಯಾಯ ಮಂಡಳಿಯಲ್ಲಿ ಏಕಪಕ್ಷೀಯ ನಿರ್ಣಯವನ್ನು ಮಾಡಿ ಗೇಣಿದಾರರೆಂದು ಬಸವಯ್ಯನವರ ಪರವಾಗಿ ಏಕಪಕ್ಷೀಯವಾಗಿ ಪರಿಗಣಿಸಲಾಯಿತು.

ನಂತರ ಭೂ ನ್ಯಾಯಮಂಡಲಿಯ ಏಕಪಕ್ಷೀಯ ತೀರ್ಪನ್ನು ಕರ್ನಾಟಕ ಉಚ್ಚ ನ್ಯಾಯಾಲಯ ನಂ. 1031:83 ರಲ್ಲಿ ತಡೆಯಾಜ್ಞೆ ನೀಡಲಾಗಿತ್ತು. ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 9-4-1996ರಲ್ಲಿ ಮೇಲಿನ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಪರಮಶಿವಯ್ಯ ಮತ್ತು ಇತರರು ಹಾಕಿಕೊಂಡ ಫಾರಂ 7 ನ್ನು ವಜಾ ಮಾಡಿದೆ. ಇವರು ಗೇಣಿದಾರರಲ್ಲ ಮತ್ತು ಇವರು 1971 ರಿಂದ 1979ರ ವರೆಗೆ ಎಲ್ಲಾ ಸಿವಿಲ್ ನ್ಯಾಯಾಲಯಗಳಲ್ಲಿ ಸೋಲು ಅನುಭವಿಸಿದ ಮೇಲೆ ಪರಮಶಿವಯ್ಯ ಮತ್ತು ಇತರರು ಗೇಣಿದಾರರೆಂದು ಹಾಕಿದ್ದ ಫಾರಂ 7 ತಿರಸ್ಕೃತವಾಗಿರುತ್ತದೆ.

ಸದರಿ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ದಿನಾಂಕ 10-6-96 ರಂದು ಬಸವಯ್ಯನವರ ಮಕ್ಕಳು ರಿಟ್ ಅರ್ಜಿ ಸಲ್ಲಿಸಿದ್ದು (ರಿಟ್ ಅರ್ಜಿ ಸಂಖ್ಯೆ 1524:96) ರಲ್ಲಿ ಕೇಳಿದ್ದ ತಡೆಯಾಜ್ಞೆಯನ್ನು ವಜಾ ಮಾಡಲಾಗಿದ್ದು, ನಂತರ ದಿನಾಂಕ 11-6-96ರಲ್ಲಿ ಸಲ್ಲಿಸಿದ್ದ ಐ. ಎ.ನಂ. 2 ರಲ್ಲಿ ಕೇಳಿದ್ದ ಇಂಜಕ್ಷನ್ ಆರ್ಡರ್ ಸಹ ವಜಾ ಮಾಡಲಾಗಿದ್ದು, ಒಂದು ವೇಳೆ ಅರ್ಜಿದಾರರು (ಬಸವಯ್ಯ) ಸ್ವಾಧೀನದಲ್ಲಿದ್ದರೆ ಅದನ್ನು ಯಥಾಸ್ಥಿತಿ ಕಾಪಾಡುವಂತೆ ಆದೇಶ ನೀಡಲಾಗಿತ್ತು.

ಶ್ರೀ ಬಸವಯ್ಯ ಮತ್ತು ಅವರ ಮಕ್ಕಳಾದ ಶ್ರೀ ಪರಮಶಿವಯ್ಯನವರು ನ್ಯಾಯಾಲಯದ ಆದೇಶದ ಮೇರೆಗೆ ಅಪೀಲುಗಳನ್ನು ಸಲ್ಲಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದವರೆಗೂ ಪ್ರತಕರಣವನ್ನು ತೆಗೆದುಕೊಂಡು ಹೋಗಿ ವಿಫಲರಾಗಿರುತ್ತಾರೆ ಹಾಗೂ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿಯೂ ಸಹ ಅವರು ಸಾಗುವಳಿದಾರರೆಂದು ಸಾಧಿಸಲು ಸಾಧ್ಯವಾಗಲಿಲ್ಲ. ಈ ಬಗ್ಗೆಯೂ ಸಹ ಕರ್ನಾಟಕ ಉಚ್ಚ ನ್ಯಾಯಾಲಯವು ಶ್ರೀ ಟಿ. ಹನುಮಯ್ಯನವರ ಪರವಾಗಿ ತೀರ್ಪನ್ನು ನೀಡಿರುತ್ತದೆ.

ದಿನಾಂಕ 21-4-96ರಂದು ಬಸವಯ್ಯನವರ ಮಕ್ಕಳು, ಶ್ರೀ ಹನುಮಯ್ಯ ಹಾಗೂ ಆತನ ಮಕ್ಕಳು ಮೇಲ್ಕಂಡ ಜಮೀನಿನಲ್ಲಿ ವಾಸವಾಗಿರುವ ಮನೆಗೆ ನುಗ್ಗಿ, ಅವರಿಗೆ ಗಲಾಟೆ ಹಾಗೂ ಹೊಡೆದಾಟ ಮಾಡಿದ್ದು ಬೆಳೆಯನ್ನು ಕಳ್ಳತನ ಮಾಡಿದ್ದು ಇತ್ಯಾದಿ ಮಾಡಿರುತ್ತಾರೆ. ಬಸವಯ್ಯನವರ ಮಕ್ಕಳ ವಿರುದ್ಧ ತಾವರೆಕೆರೆ ಪೊಲೀಸ್ ಠಾಣೆಗೆ ನೀಡಿದ ಫಿರ್ಯಾದು ಮೇರೆಗೆ ಸದರಿ ಠಾಣೆಯ ಅಪರಾಧ ಕ್ರಮಾಂಕ ಸಂಖ್ಯೆ 64:96 ಕಲಂ 143, 448, 323, 324, 447, ಐಪಿಸಿ ವಗೈರೆ ಪ್ರಕಾರ ಮೊಕದ್ದಮೆಯನ್ನು ನೋಂದಾಯಿಸಲಾಗಿದ್ದು, ಆರೋಪಿಗಳನ್ನು ದಸ್ತಗಿರಿ ಮಾಡಿ, ಅವರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನಾಯಾಲಯಕ್ಕೆ ಸಲ್ಲಿಸಲಾಗಿದೆ. ಶ್ರೀ ಹನುಮಯ್ಯ ಹಾಗೂ ಆತನ ಮಕ್ಕಳಿಗೆ ರಕ್ಷಣೆಯನ್ನೂ ಕೊಟ್ಟಿರುತ್ತಾರೆ.

ದಿನಾಂಕ 29-12-1996 ರಂದು ಸದರಿ ಜಮೀನಿನಲ್ಲಿ ಟಿ. ಹನುಮಯ್ಯನ ಮಕ್ಕಳಾದ ಮುಕುಂದ ಮತ್ತು ಕೃಷ್ಣಪ್ಪ, ಇತರರು ವಾಸವಿದ್ದಾಗ ಬಸವಯ್ಯನ ಮಕ್ಕಳಾದ ಪರಮಶಿವಯ್ಯ ಮತ್ತು ಇತರರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಫಿರ್ಯಾದಿದಾರರಿಗೆ ಹೊಡೆದು, ವ್ಯವಸಾಯ ಸಾಮಗ್ರಿಗಳನ್ನು ಮತ್ತು ಸೂರ್ಯಕಾಂತಿ, ಹುರುಳಿ ಬೆಳೆಗಳನ್ನು, ಒಟ್ಟು ಸುಮಾರು ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳುವ ಮಾಲುಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆಂದು ನೀಡಿದ ಫಿರ್ಯಾದು ಮೇರೆಗೆ ತಾವರೆಕೆರೆ ಪೊಲೀಸ್ ಠಾಣೆ ಅಪರಾಧ ಕ್ರಮಾಂಕ 229:96 ಕಲಂ 143, 147, 148, 149, 447, 323, 506, 579 ಐಪಿಸಿ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ಸದರಿ ಪ್ರಕರಣದಲ್ಲಿ ದಿನಾಂಕ 17-1-1997ರಂದು ತಲೆಮರೆಸಿಕೊಂಡಿದ್ದ ಆರೋಪಿಗಳಾದ ಚಿನ್ನಬಸಪ್ಪ ಬಿನ್ ಬಸವಯ್ಯ ಹಾಗೂ ಇನ್ನಿತರ 3 ಜನರನ್ನು ದಸ್ತಗಿರಿ ಮಾಡಿ ಹುರುಳಿ ಕಾಳು ಬೆಳೆಯನ್ನು ಅವರಿಂದ ಅಮಾನತ್ತುಪಡಿಸಿ, ಅದೇ ದಿನ ಆರೋಪಿಗಳನ್ನು ಮಾಗಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಮಾಗಡಿ ಶಾಸಕರಾದ ಶ್ರೀ ಬಾಲಕೃಷ್ಣನವರು ಮಾಡಿರುವ ಆಪಾದನೆಯಂತೆ ಹಾಲಿ ಅನುಭೋಗದಲ್ಲಿರುವ ಯಾರನ್ನೂ ಸಹ ಒಕ್ಕಲೆಬ್ಬಿಸಿರುವುದಿಲ್ಲ ಹಾಗೂ ಕಾನೂನುಬಾಹಿರವಾಗಿ ಯಾರಿಗೂ ಸಹ ರಕ್ಷಣೆ ನೀಡಿರುವುದಿಲ್ಲ.

ಡಾ: ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಎರಡು ದೂರುಗಳ ಬಗ್ಗೆ ಮಾತ್ರ ಹೇಳಿದ್ದಾರೆ. ಮೂರನೆ ದೂರಿನ ಬಗ್ಗೆ ಬಿಟ್ಟು ಬಿಟ್ಟಿದ್ದಾರೆ. ಮೂರನೆಯ ದೂರಿನ ಬಗ್ಗೆ ಯಾರೋ ವಾಚ್‌ಮನ್ ಎಂದು ಸೃಷ್ಟಿ ಮಾಡಿ ಇನ್ನೊಂದು ದೂರನ್ನು ಕೊಟ್ಟಿದ್ದಾರೆ. ಎರಡನೆಯ ದೂರನ್ನು 3-8-96ರಲ್ಲಿ ಪುಟ್ಟಮ್ಮ ವೈಫ್ ಆಫ್ ರಾಮಚಂದ್ರಯ್ಯ ಎಂಬುವವರು ಕೊಟ್ಟಿದ್ದಾರೆ, ಅವರು ಯಾರು? ಮೂರನೆಯ ದೂರನ್ನು 29-12-96ರಲ್ಲಿ ಕೃಷ್ಣಪ್ಪ ಬಿನ್ ವೀರಪ್ಪ ಎಂಬುವವರು ಕೊಟ್ಟಿದ್ದಾರೆ. ಅವರು ಯಾರು? ಆ ವ್ಯಕ್ತಿಗೂ ಮುಕುಂದನಿಗೂ ಸಂಬಂಧವೇನಿದೆ? ಜೊತೆಗೆ ಮೂರು ದೂರುಗಳಲ್ಲೂ ಹೇಳಿಕೆಗಳು ಒಂದೇ ರೀತಿ ಇವೆ. ದೂರು ಕೊಡಬೇಕಾದರೆ ಎಂಟು ಸಾವಿರ ರೂಪಾಯಿಗಳ ಸರ ಕಿತ್ತುಕೊಂಡಿದ್ದಾರೆ, ನಮ್ಮನ್ನು ಓಡಿಸಿದ್ದಾರೆ ಮುಂತಾಗಿ ಒಂದೇ ರೀತಿಯಾದ ಹೇಳಿಕೆಗಳು ಇವೆ. ದಿನಾಂಕ 9-4-96ರಲ್ಲಿ ಮುಕುಂದ್‌ರವರ ಪರವಾಗಿ ಆರ್ಡರ್ ಆಯಿತು. ಹಿಂದೆ ಪೊಜಿಷನ್‌ನಲ್ಲಿ ಯಾರು ಇದ್ದರು ಎಂಬ ಬಗ್ಗೆ ದಯಮಾಡಿ ಹೇಳಬೇಕು. ಐವತ್ತು ವರ್ಷಗಳಿಂದ ಪಹಣಿ, ಖಾತೆ ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ಮಂತ್ರಿಗಳು ದಯಮಾಡಿ ಹೇಳಬೇಕು. ಡಬ್ಬಲ್ ಬೆಂಚ್‌ನಲ್ಲಿ ಅದಕ್ಕೆ ಸ್ಟೇಟಸ್‌ಕೋವನ್ನು ಕೊಟ್ಟಿದ್ದಾರೆ. ಅದನ್ನು ಮೆನ್‌ಟೇನ್ ಮಾಡುವುದಕ್ಕೋಸ್ಕರ ಬಸವಯ್ಯನವರನ್ನು ಹೊರಗಡೆ ಕಳುಹಿಸುವುದಕ್ಕೋಸ್ಕರ ಪೋಲೀಸ್‌ನವರು ಸಂಚನ್ನು ಮಾಡಿ ಈ ಮೂರು ದೂರುಗಳನ್ನು ತೆಗೆದುಕೊಂಡಿದ್ದಾರೆ. ಕೋರ್ಟಿನ ಆದೇಶದಲ್ಲಿ ಹಿಂದೆ ಇದ್ದವರೇ ಪೊಜಿಷನ್‌ನಲ್ಲಿ ಇದ್ದರು ಎಂದು ಹೇಳಿದ್ದಾರೆ. ಆದ್ದರಿಂದ ಹಿಂದೆ ಯಾರು ಪೊಜಿಷನ್‌ನಲ್ಲಿದ್ದರು ಮತ್ತು ಸ್ಟೇಟಸ್‌ಕೋ ಏನಿದೆ ಅದನ್ನು ಮೆನ್‌ಟೇನ್ ಮಾಡಿ. 16-2-1997ರಂದು ಸಂಜೆ 5 ಗಂಟೆಗೆ ನಂ : ಕೆಎ 01 ಜಿ 1345ನೇ ನಂಬರಿನ ಪೊಲೀಸ್ ವ್ಯಾನ್ ಜೊತೆಗೆ ಎಂ. ಇ. ಎಫ್. 2810ನೇ ನಂಬರಿನ ಖಾಸಗಿ ವ್ಯಾನು. ಈ ಎರಡೂ ವಾಹನಗಳಲ್ಲಿ ಸ್ಥಳಕ್ಕೆ ಹೋಗಿ ಅಲ್ಲಿರತಕ್ಕ ಜನರನ್ನು ಹೊಡೆದು ಓಡಿಸಿದ್ದಾರೆ. ಯಾವ ಆರ್ಡರ್ ಮೇಲೆ ಪೋಲೀಸ್‌ನವರು ಆ ಸ್ಥಳಕ್ಕೆ ಹೋದರು ಎಂಬ ಬಗ್ಗೆ ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು. ಜೊತೆಗೆ ಸಂಬಂಧಪಟ್ಟ ಎಸ್. ಐ. ಯಾರಿದ್ದಾರೆ ಅವರನ್ನು ಅಮಾನತ್ತುಗೊಳಿಸಬೇಕು. ಎಂಬುವವರು ಕೃಷ್ಣಪ್ಪ ಎಂಬುವವರಿಗೆ ಮಾರಾಟ ಮಾಡಿಬಿಟ್ಟಿದ್ದಾರೆ. ಕೋರ್ಟ್‌ನಲ್ಲಿ ಸ್ಟೇಟೀಸ್‌ಕೋ ಇದ್ದರೂ ಸಹ ಕೃಷ್ಣಪ್ಪ ಎಂಬುವವನು ಈ ಜಮೀನನ್ನು ತೆಗೆದುಕೊಂಡಿದ್ದಾನೆ. ಈ ಕೃಷ್ಣಪ್ಪ ಯಾರು ಎಂಬುದನ್ನು ತಮ್ಮ ಗಮನಕ್ಕೆ ತರುವುದಾದರೆ, ಇವರು ಒಬ್ಬ ಲ್ಯಾಂಡ್ ಮಾಫಿಯಾ, ಅವನು ಈ ರೀತಿ ಬೆಂಗಳೂರಿನ ಸುತ್ತಮುತ್ತಲಿರುವ, ಬಡವರ, ಕಿತಾಪತಿ ಇರುವ ಜಮೀನುಗಳನ್ನು ಏನೂ ಹಣವನ್ನು ಕೊಡದೆ ನೊಂದಾವಣೆ ಮಾಡಿಸಿಕೊಳ್ಳುವ ಪರಿಪಾಠವನ್ನು ಕಲಿತುಬಿಟ್ಟಿದ್ದಾನೆ. ಅವನು ಪೋಲೀಸ್‌ನವರನ್ನು ಉಪಯೋಗಿಸಿಕೊಂಡು ಅವರನ್ನು ಒಕ್ಕಲೆಬ್ಬಿಸುವ ಕೆಲಸಕ್ಕೆ ಹೊರಟಿದ್ದಾನೆ. ಪೊಜಿಷನ್ ಕೊಡಿಸುವುದಕ್ಕೋಸ್ಕರ ಸಂಜೆ ಐದು ಗಂಟೆಗೆ ಪೊಲೀಸ್‌ರವರನ್ನು ಕಳಿಸುತ್ತೀರಲ್ಲ; 16-2-97ರಲ್ಲಿ ಆ ರೀತಿ ಹೋಗಲು ಪೊಲೀಸ್‌ನವರ ಹತ್ತಿರ ಯಾವ ಆದೇಶವಿತ್ತು?

ಅಧ್ಯಕ್ಷರು : ಮಾನ್ಯ ಬಾಲಕೃಷ್ಣರವರೆ, ದಯಮಾಡಿ ಮಂತ್ರಿಗಳು ಕೊಟ್ಟಿರುವ ಹೇಳಿಕೆಯನ್ನು ಪೂರ್ಣವಾಗಿ ಓದಿಬಿಡಿ. ಇವರು ಇಂತಿಂಥ ಜಮೀನು ವಿವಾದದಲ್ಲಿ ಪೋಲೀಸರು ಬಂದಿದ್ದಾರೆಂದು ಗಮನ ಸೆಳೆದಿದ್ದಾರೆ. ಆ ಜಮೀನು ವಿವಾದಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಚಿವರು ಕೊಟ್ಟುಬಿಟ್ಟಿದ್ದಾರೆ. ಇಲ್ಲಿ ಮೂಲಭೂತವಾಗಿ ವ್ಯವಹಾರ ಇರತಕ್ಕದ್ದು ಹನುಮಯ್ಯ ಮತ್ತು ಬಸವಯ್ಯ ಅಲ್ಲ, ಅವರುಗಳು ಎಲ್ಲಾ ಕೋರ್ಟ್‌ನಲ್ಲೂ ವ್ಯವಹಾರವನ್ನು ಕಳೆದುಕೊಂಡಿದ್ದಾರೆ. ಫಾರಂ 7 ನ್ನು ಮೊದಲೇ ಫೈಲ್ ಮಾಡುವುದಿಲ್ಲ, ಎಲ್ಲಾ ಕೋರ್ಟ್‌ನಲ್ಲೂ ವ್ಯವಹಾರವನ್ನು ಕಳೆದುಕೊಂಡ ಮೇಲೆ ಮಾಡುತ್ತಾರೆ.

ಡಾ: ಹೆಚ್. ಸಿ. ಬಾಲಕೃಷ್ಣ : ಇದು ನ್ಯೂ ಇಶ್ಯೂ ಅಲ್ಲ. ಸ್ಟೇಟಸ್‌ಕೋ ಇರತಕ್ಕಂಥ ಸಂದರ್ಭದಲ್ಲಿ ಪೋಲೀಸ್‌ನವರು ಅವರನ್ನು ಒಕ್ಕಲೆಬ್ಬಿಸಿದ್ದಾರೆ.

ಅಧ್ಯಕ್ಷರು : ಸ್ಟೇಟಸ್‌ಕೋ ಎಂದರೆ ಯಥಾಸ್ಥಿತಿ ಕಾಯ್ದುಕೊಂಡು ಬರುವುದು. ಒಂದು ವೇಳೆ ಅವರು ಆ ಜಮೀನಿನಲ್ಲಿ ಇರುವುದಾದರೆ ಮೊದಲೇ ಫಾರಂ 7 ಅನ್ನು ಏಕೆ ಫೈಲ್ ಮಾಡಲಿಲ್ಲ? ಅವರು ಲಾ ಸಿವಿಲ್ ಕೋರ್ಟ್‌ನಲ್ಲಿ ಎಲ್ಲಾ ವ್ಯವಹಾರವನ್ನು ಕಳೆದುಕೊಂಡ ಮೇಲೆ ಅವರು ಫಾರಂ 7ನ್ನು ಫೈಲ್ ಮಾಡುತ್ತಾರೆ. ಹೈಕೋರ್ಟ್‌ನಲ್ಲಿ ಇದು ಪೊಲಿಟಿಕಲ್ ತೀರ್ಮಾನವೆಂದು ಏಕಪಕ್ಷೀಯವಾಗಿ ಕ್ಯಾಷ್ ಮಾಡಿದ್ದಾರೆ. They have not been accepted as the registered occupants. That means to say they are not in possession of the land. They have lost the litigation in all the courts.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಹೈಕೋರ್ಟ್‌ನಲ್ಲಿ ಫಾರಂ 7 ನ್ನು ಕ್ಯಾಷ್ ಮಾಡುವುದಕ್ಕಾಗುವುದಿಲ್ಲ. ಅದು ಪುನಃ ರಿಮೈಂಡ್ ಆಗುತ್ತದೆ. ಬೇಕಾದರೆ ಹತ್ತು ಸಲ ಲ್ಯಾಂಡ್ ಟ್ರಿಬ್ಯುನಲ್‌ನಿಂದ ಹೈಕೋರ್ಟ್‌ಗೆ ಹೋಗಬಹುದು, ಹೈಕೋರ್ಟ್‌ನಿಂದ ಪುನಃ ಲ್ಯಾಂಡ್ ಟ್ರಿಬ್ಯುನಲ್‌ಗೆ ಹೋಗಬಹುದು.

ಅಧ್ಯಕ್ಷರು : ಲ್ಯಾಂಡ್ ಟ್ರಿಬ್ಯುನಲ್ ಮ್ಯಾಟರ್ ಏನೆಂದು ಮಾಡಿದ್ದಾರೆ? I uphold that observation. ಫಾರಂ 7 ನ್ನು ಯಾವಾಗ ಫೈಲ್ ಮಾಡಬೇಕು? ಸಿವಿಲ್ ಕೋರ್ಟ್‌ಗೆ ಹೋಗುತ್ತಾರೆ, ಹೈಕೋರ್ಟ್‌ಗೆ ಹೋಗುತ್ತಾರೆ, ಅವೆಲ್ಲವನ್ನೂ ಕಳೆದುಕೊಂಡಮೇಲೆ ಫಾರಂ 7ನ್ನು ಫೈಲ್ ಮಾಡುವ ಬಗ್ಗೆ ನೆನಪು ಬರುತ್ತದೆ. ಫಾರಂ 7ರ ಬಗ್ಗೆ ನಮ್ಮ ರಾಜ್ಯದಲ್ಲಿ ಕಾನೂನನ್ನು ತಂದಿದ್ದೇಕೆ? ಗೇಣಿದಾರರು ಯಾರಿದ್ದಾರೆ ಅವರಿಗೆ ರಕ್ಷಣೆಯನ್ನು ಕೊಡಬೇಕು ಎನ್ನತಕ್ಕ ಉದ್ದೇಶದಿಂದ ತಂದದ್ದು. ಆದರೆ ಗೇಣಿದಾರರು ಎಲ್ಲಾ ಕೋರ್ಟಿಗೂ ಹೋಗಿ ಕಳೆದುಕೊಂಡಬಂದಮೇಲೆ ಅನಂತರ ಎಚ್ಚರಗೊಂಡು ಫಾರಂ 7ನ್ನು ಫೈಲ್ ಮಾಡಲು ಹೋದರೆ ಅದು ಯಾವ ರೀತಿ? ಫಾರಂ 7 ಅದಕ್ಕಾಗಿ ಇದೆಯೇ?

ಡಾ: ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಕೋರ್ಟ್‌ನಲ್ಲಿರುವ ವಿಷಯದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಡಬ್ಬಲ್ ಬೆಂಚ್‌ನಲ್ಲಿ ಸ್ಟೇಟಸ್‌ಕೋ ಇದೆ, ಅಲ್ಲಿ ತೀರ್ಮಾನವಾಗುತ್ತದೆ. 25-1-96ರಲ್ಲಿ ಬಸವಯ್ಯನವರ ಪರವಾಗಿ ವಿಲೇಜ್ ಅಕೌಂಟರು ಪಹಣಿಯನ್ನು ಬರೆದಿದ್ದಾರೆ. ಅರವತ್ತು ವರ್ಷಗಳಿಂದ ಅವರ ಹೆಸರಿನಲ್ಲಿಯೇ ಪಹಣಿ, ಖಾತೆಗಳು ಬರುತ್ತಿವೆ. ಆದರೆ

ಇವತ್ತು ಒಂದು ಆರ್ಡರ್ ಆದತಕ್ಷಣ ಪೋಲೀಸ್‌ನವರು ಏಕಾಏಕಿ ಹೋಗಿ ಅವರನ್ನು ಒಕ್ಕಲೆಬ್ಬಿಸುವುದು ಸರಿಯಲ್ಲ. ವಿಲೇಜ್ ಅಕೌಂಟೆಂಟ್‌ರ ಹೆಸರಿನಲ್ಲಿಯೇ ಖಾತೆ, ಪಹಣಿಯನ್ನು ಬರೆದುಕೊಂಡು ಬಂದಿದ್ದಾರೆ.

ಅಧ್ಯಕ್ಷರು : ವಿಲೇಜ್ ಅಕೌಂಟೆಂಟ್ಸ್ ಒಳ್ಳೆಯವರು, ಅವರು ಆ ರೀತಿ ಬರೆಯುತ್ತಾರೆ. ಪಹಣಿಯನ್ನು ಬರೆಯುವ ವಿಚಾರಕ್ಕೆ ನಮ್ಮದೇನೂ ತಕರಾರಿಲ್ಲ. ಗ್ರಾಮಲೆಕ್ಕಿಗರು ನಮ್ಮವರೇ. ತಾವು ಮಂತ್ರಿಯವರು ಕೊಟ್ಟಿರುವ ಹೇಳಿಕೆಯನ್ನು ಮತ್ತೊಮ್ಮೆ ಓದಿ, ಅನಂತರ ಹೇಳಿ.

ಡಾ: ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಹೇಳಿಕೆಯನ್ನು ಓದಿದ್ದೇನೆ. ಈಗ ಅಲ್ಲಿ ಕೃಷ್ಣಪ್ಪ ಎನ್ನುವವನು ಪ್ರವೇಶ ಮಾಡಿದ್ದಾನೆ. ಹನುಮಯ್ಯನವರಿಗೂ ಮತ್ತು ಅವರಿಗೂ ವ್ಯಾಜ್ಯವಿದೆ, ಅದನ್ನು ತೀರ್ಮಾನ ಮಾಡಲಿ. ಸ್ಪೇಟಸ್‌ಕೋ ಇದ್ದಂಥ ಸಂದರ್ಭದಲ್ಲಿ ಕೃಷ್ಣಪ್ಪ ಎಂಬುವವರು 29-12-96ರಲ್ಲಿ ದೂರನ್ನು ಕೊಟ್ಟಿದ್ದಾನೆ. ಕೃಷ್ಣಪ್ಪ ಯಾರು? ಇದಕ್ಕೂ ಅವನಿಗೂ ಇರುವ ಸಂಬಂಧವೇನು? ಮುಕುಂದರವರಿಗೂ ಮೃತ್ಯುಂಜಯರವರಿಗೂ ಕೋರ್ಟ್‌ನಲ್ಲಿ ಕೇಸು ನಡೆಯುತ್ತಿರುವ ಸಂದರ್ಭದಲ್ಲಿ, ಕೃಷ್ಣಪ್ಪ ಪ್ರವೇಶ ಮಾಡಿದ. ಪೋಲೀಸ್‌ನವರ ಸಹಾಯದಿಂದ ಈ ಕೃಷ್ಣಪ್ಪ ಅವರನ್ನು ಹೊರಗಡೆ ಹಾಕಲು ಪ್ರಯತ್ನಪಟ್ಟು ಈಗ ಅವರನ್ನು 16-2-97ರಲ್ಲಿ ಹೊರಗೆ ಹಾಕಿದ್ದಾನೆ. ಪೊಜಿಷನ್‌ನಲ್ಲಿದ್ದ ಅವರನ್ನು ಪೋಲೀಸ್‌ನವರು ಏಕಾಏಕಿ ಎತ್ತಿ ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ಪೋಲೀಸ್‌ನವರು ಇಂಥ ಸಂದರ್ಭದಲ್ಲಿ ಡಿ. ಎ. ಆರ್. ವ್ಯಾನನ್ನು ಬಳಸಿಕೊಳ್ಳುತ್ತಾರೆ. ಬೇರೆ ಎಲ್ಲಾದರೂ ಗಲಾಟೆಗಳಾದರೆ ಯಾರೂ ಹೋಗುವುದಿಲ್ಲ. ಯಾರಾದರೂ ಬಡವರನ್ನು ಎತ್ತಿಹಾಕುವಂಥ ಪ್ರಸಂಗದಲ್ಲಿ ಇವರನ್ನು ಬಳಸಿಕೊಳ್ಳುತ್ತಾರೆ.

ಅಧ್ಯಕ್ಷರು : ಆ ವಿಚಾರವೆಲ್ಲಾ ಈಗ ಬೇಡ. ಈಗ ಬೆಂಗಳೂರಿನ ಸುತ್ತಮುತ್ತಲಿರುವ ಜಮೀನಿಗೆ ಬೆಲೆ ಬಂದಿದೆ. ಬೆಳ್ಳಿ ಬಂಗಾರವಿದ್ದಂತೆ ಆಗಿದೆ. ಆದ್ದರಿಂದ ಯಾರು ಏನು ಹೇಳುತ್ತಾರೆಂದು ನನಗೆ ಗೊತ್ತೇ ಆಗುವುದಿಲ್ಲ. ಇದೊಂದು ಅಯೋಮಯವಾಗಿದೆ.

ಶ್ರೀ ಆರ್. ರೋಷನ್‌ಬೇಗ್ (ಗೃಹ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷ್ಣಪ್ಪ, ಮುಕುಂದ ಯಾರು ಎಂಬುದಕ್ಕಿಂತ ಯಾರಿಗೆ ರಕ್ಷಣೆಯನ್ನು ಕೊಡಬೇಕಾಗಿದೆಯೋ ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದೇವೆ. ಆ ರೀತಿ ಒಂದು ವೇಳೆ ರಕ್ಷಣೆ ದೊರೆಕಿರದಿದ್ದಲ್ಲಿ ಅವರು ಹೇಳಲಿ. ಮಾನ್ಯ ಸದಸ್ಯರೇನು ಐದು ಸರ್ವೆ ನಂಬರ್‌ಗಳ ಜಮೀನು ವಿವಾದದ ಬಗ್ಗೆ ಎತ್ತಿದ್ದಾರೆ ಅದರ ಬಗ್ಗೆ ನಾನು ಗಮನಹರಿಸಿದ್ದೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಇನ್ನು ಯುವಕರು. ಅವರಿಗೆ ತಾವು ಗೈಡ್ ಮಾಡಿ. ಯಾರೂ ಕಂಪ್ಲೆನೆಂಟ್ ಪೋಲೀಸ್ ಮುಂದಿದ್ದಾರೆ ಅವರಿಗೆ ಲೋಕಸ್ ಸ್ಟ್ಯಾಂಡ್ ಏನೂ ಇಲ್ಲದಿದ್ದರೆ. If he is an illegal complaint, if he has no right or entitlement to lodge a complaint and if police, by any chance have proceeded on the strength of that complaint, it is definitely unfair. Therefore Mr. Ramakrishna you kindly discuss with this youngman. You kindly discuss all these matters. You make a fresh representation.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆ ಒಳ್ಳೆಯದಾಗಿದೆ. ಅದರ ಪ್ರಕಾರವೇ ಅವರು ಮಂತ್ರಿಗಳನ್ನು ನೋಡಲಿ.

MR. SPEAKER : I ask the officers to remain with open mind. If officers have transgressed we will advice the Hon. Minister to initiate suitable action against them and we will get to know the position. You kindly get hold of the matters. In the absence of your leader, I will have to depend upon you.

ಶ್ರೀ ವೈ. ರಾಮಕೃಷ್ಣ : ಏನೆಂದರೆ ಎಂಟು ಜನ ವ್ಯವಸಾಯಗಾರರನ್ನು ಒಕ್ಕಲೆಬ್ಬಿಸುವುದೆಂದರೆ ಅಷ್ಟು ಸುಲಭವಲ್ಲ. ಆದ್ದರಿಂದ ಅವರ ಮನಸ್ಸು ಎಜಿಟೇಟ್ ಆಗಿದೆ.

ಡಾ: ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಇವತ್ತು ಆ ಎಂಟು ಜನರು ಬೀದಿಪಾಲಾಗಿದ್ದಾರೆ.

ಅಧ್ಯಕ್ಷರು : ಇದು ವ್ಯವಸಾಯದ ಜಮೀನಿಗಿಂತ ಸೈಟಿನ ಜಮೀನಿನ ತಕರಾರು ಹೆಚ್ಚಿಗೆ ಇದರಲ್ಲಿ ಇದ್ದಂತೆ ಕಾಣುತ್ತದೆ.

ಡಾ: ಹೆಚ್. ಸಿ. ಬಾಲಕೃಷ್ಣ : ಇದು ಸೈಟಿನ ಜಮೀನಲ್ಲ, ವ್ಯವಸಾಯದ ಜಮೀನು.

ಅಧ್ಯಕ್ಷರು : ನಮಗೆ ಒಂದು ಅಂದಾಜು ಇರುತ್ತದೆ, ಅದರ ಆಧಾರದ ಮೇಲೆ ಹೇಳುತ್ತೇವೆ. ತಾವು ಎಲ್ಲ ಮಾಹಿತಿಯನ್ನು ವೈ. ರಾಮಕೃಷ್ಣರವರ ಹತ್ತಿರ ಕೊಡಿ. ನಾನು ಮತ್ತೆ ಕರೆಸಿ ಮಾತನಾಡುತ್ತೇನೆ.

3. : ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) : ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನವನ್ನು ಮೀಸಲಾಗಿಟ್ಟುಕೊಂಡಿರುವುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ಮೀಸಲಾಗಿಟ್ಟುಕೊಂಡಿದ್ದರಲ್ಲಿ ನನ್ನ ಕ್ಷೇತ್ರದ ಕೊಟಗಾರ ಪರಿಶಿಷ್ಟ ಜಾತಿಗೆ ಸೇರಿದ ರಾಮ ಎಂಬುವವರು ಅಧ್ಯಕ್ಷರಾಗಿದ್ದಾರೆ. ಕಳೆದ ಐದಾರು ವರ್ಷಗಳಿಂದ ಕಲ್ಲೂರ ಎಂಬುವವರು ಅಲ್ಲಿ ಕಾರ್ಯದರ್ಶಿಯಾಗಿದ್ದರು. ಈ ಅಧ್ಯಕ್ಷರು ಅನಕ್ಷರಸ್ಥರಾಗಿದ್ದುದರಿಂದ ಹೆಸರಿಗೆ ಮಾತ್ರ ಅವರು ಅಧ್ಯಕ್ಷರಾಗಿದ್ದು ಎಲ್ಲಾ ಜವಾಬ್ದಾರಿಗಳನ್ನು ಕಾರ್ಯದರ್ಶಿಗಳೇ ನೋಡಿಕೊಳ್ಳುತ್ತಿದ್ದಾರೆ. ಅವರು ಅವ್ಯವಹಾರ ಮಾಡುತ್ತಿದ್ದಾರೆ ಎಂದು ಸ್ವತಃ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಕಂಪ್ಲೆಂಟ್ ಕೊಟ್ಟಿದ್ದಾರೆ. ಪಂಚಾಯತ್ ಸಭೆಯಲ್ಲಿ ಏನು ನಿರ್ಣಯವಾಗುತ್ತಿದೆ ಆ ನಿರ್ಣಯವನ್ನು ಅವರು ಜಾರಿಗೊಳಿಸುತ್ತಿಲ್ಲ ಮತ್ತು ಮಿನಿಟ್ ಪುಸ್ತಕದಲ್ಲಿ ಪೂರ್ಣವಾಗಿ ಅದನ್ನು ಬರೆಯುತ್ತಾ ಇಲ್ಲ. ಅಧ್ಯಕ್ಷರಿಗೆ ತಪ್ಪು ಮಾಹಿತಿ ಕೊಟ್ಟು ಅವರಿಗೆ ಬೇಕಾದಂತೆ ಗೊತ್ತು ಗೊತ್ತಿಲ್ಲದ ಎಲ್ಲ ಕಾಗದ ಪತ್ರಗಳಿಗೆ ಅಧ್ಯಕ್ಷರು ಅನಕ್ಷರಸ್ಥರಾಗಿರುವುದರಿಂದ